**ಸಾಕ್ಷಿಯನ್ನು ದಿನಾಂಕಃ 19-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ**

13. ನನ್ನ ತಂದೆ ಈ ಹಿಂದೆ ಸಲ್ಲಿಸಿದ್ದ OS No. 180/1992 ರಲ್ಲಿ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಲಾಗಿದ್ದು ಆದರಲ್ಲಿ ಆಯುಕ್ತರು ವರದಿ ಮತ್ತು ಸ್ಕೆಚ್ಚನ್ನು ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಸದರಿ ಸ್ಕೆಚ್ಚಿನಲ್ಲಿ ನ್ಯಾಯಾಲಯದ ಆಯುಕ್ತರು ಸೂಚನಾವಳಿಗಳ ಪ್ರಕಾರ ನನ್ನ ಮತ್ತು ಪ್ರತಿವಾದಿಯ ಮಧ್ಯ ಸಂದು ಇದೆ ಎಂದು ಉಲ್ಲೇಖಿಸಿರುವರು ಮತ್ತು ತೋರಿಸಿರುವರು ಅಂದರೆ ಸರಿಯಲ್ಲ. ಸದರಿ ಸಂದು ಕುರುಬರ ಮಗ್ಗಗಳಿಗೆ ಹೋಗುವ ದಾರಿಯಾಗಿದೆ ಎಂದು ಕೂಡ ಕಾಣಿಸಿರುವರು ಅಂದರೆ ಸರಿಯಲ್ಲ. ಸದರಿ ನಕಾಶೆಯಲ್ಲಿ ಕುರುಬರ ಮಗ್ಗಗಳು ಇವೆ ಎಂದು ಕೂಡ ಉಲ್ಲೇಖಿಸಲಾಗಿವೆ ಅಂದರೆ ಸುಳ್ಳು. ಸದರಿ OS No. 180/1992 ರಲ್ಲಿ ಸಲ್ಲಿಸಲಾದ ದಾಖಲೆಗಳನ್ನು ಮತ್ತು ನ್ಯಾಯಾುಲಯದ ಆಯುಕ್ತರ ವರದಿ ಮತ್ತು ನಕಾಶೆಗಳನ್ನು ಈ ದಾವೆಯಲ್ಲಿ ಸಲ್ಲಿಸಲು ತೊಂದರೆ ಇದೆಯಾ ಅಂದರೆ ಅದರ ಅವಶ್ಯಕತೆ ಇರುವುದಿಲ್ಲ ಕಾರಣ ಎರಡೂ ದಾವೆಗಳು ಬೇರೆ ಬೇರೆ ಆಗಿರುತ್ತವೆ.

14. ನನ್ನ ತಂದೆ OS 180/1992 ನ್ನು ದಾವಾ ಅಸ್ತಿಯ ಮೇಲೆಯೇ ದಾಖಲಿಸಿದ್ದರು ಅಂದರೆ ಸರಿ. ಆ ದಾವೆಯಲ್ಲಿ ನನ್ನ ತಂದೆ ವಕೀಲರ ಮುಖಾಂತರ ಒಂದು ನಕಾಶೆಯನ್ನು ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಅದರಲ್ಲಿಯೂ ಕೂಡ

ಸಂದು, ಕುರುಬರ ಮಗ್ಗಳು ಕಂಡು ಬಂದಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಗೆ ವಕೀಲರು ಒಂದು ಪೊಟೋವನ್ನು ತೋರಿಸಿದ್ದು ಅದರಲ್ಲಿ ಕಂಡು ಬರುವ ಜಾಗಕ್ಕೆ ಸಂಬಂದಿಸದಂತೆ ಈ ದಾವೆ ನಡೆಯುತ್ತಿರುವುದು ಎಂದು ಸಲಹೆ ಮಾಡಿರುವರು, ಸಾಕ್ಷಿಯು ಅದನ್ನು ಒಪ್ಪಿಕೊಂಡಿರುವರು. ನ್ಯಾಯಾಲಯದ ಮುಂದಿನ ರೆಫರೆನ್ಸಗಾಗಿ ಸದರಿ ಪೊಟೋವನ್ನು ***ನಿಸಿ 1*** ಎಂದು ಗುರುತಿಸಲಾಯಿತು.

15. ನನ್ನ ತಂದೆಯವರು ಹಿಂದಿನ ದಾವೆಗಳನ್ನು ಕೂಡ ಪೊಟೋದಲ್ಲಿ ಕಂಡು ಬರುತ್ತಿರುವ ಜಾಗಕ್ಕೆ ಸಂಬಂದಿಸಿದಂತೆ ಸಲ್ಲಿಸಿದ್ದರು ಅಂದರೆ ಸರಿ. ಸಾಕ್ಷಿಗೆ ವಕೀಲರು ಒಂದು ಪೊಟೋವನ್ನು ತೋರಿಸಿದ್ದು ಅದರಲ್ಲಿ ನಿಮ್ಮ ಮನೆ ಮತ್ತು ದಾರಿ ಎರಡೂ ಕುಂಡು ಬರುತ್ತಿದೆ ಎಂದು ಸಲಹೆ ಮಾಡಿರುವರು ಸಾಕ್ಷಿಯು ಅದನ್ನು ಒಪ್ಪಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದಿನ ರೆಫರೆನ್ಸಗಾಗಿ ಸದರಿ ಪೊಟೋವನ್ನು ***ನಿಸಿ 2*** ಎಂದು ಗುರುತಿಸಲಾಯಿತು.

16. ನಿಸಿ 2 ರಲ್ಲಿ ಕಾಣಿಸಿದಂತೆ ಸಾರ್ವಜನಿಕರ ಅನುಕೂಲಕ್ಕಾಗಿ ಪಂಚಾಯತಿಯವರು ಚಪ್ಪಡಿ ಕಲ್ಲನ್ನು ಹಾಕಿರುವರು ಅಂದರೆ ಸರಿಯಲ್ಲ. ಚಪ್ಪಡಿ ಕಲ್ಲನ್ನು ತೆಗೆದು ಆ ಜಾಗದಲ್ಲಿ ಸಿಮೆಂಟ್ ರಸ್ತೆ ಮಾಡಿರುವರು ಅಂದರೆ ಸರಿಯಲ್ಲ. ನಿಪಿ 28 ರಂತೆ ಸಿಮೆಂಟ್ ರಸ್ತೆ ಕಾಣಿಸುತ್ತದೆ ಅಂದರೆ ಸರಿ. ನಿಪಿ 28 ಮತ್ತು ನಿಸಿ 1 ಎರಡಲ್ಲೂ ಕಂಡು ಬರುವ ಜಾಗ ಒಂದೇ ಅಂದರೆ ಸರಿ. ಸದರಿ ಎರಡೂ ಪೊಟೊಗಳಲ್ಲಿ ಕಂಡು ಬರುವ ಜಾಗವನ್ನು ನನ್ನ ತಂದೆ ಸಲ್ಲಿಸಿದ್ದ ಹಿಂದಿನ

ದಾವೆಯಲ್ಲಿನ ಶೊಡ್ಯೂಲಿನಲ್ಲಿ ಕುರುಬರ ಮಗ್ಗಳಿಗೆ ಹೋಗುವ ದಾರಿ ಎಂದು ಕಾಣಿಸಿರುವರು ಅಂದರೆ ಸರಿಯಲ್ಲ.

17. ನನ್ನ ತಂದೆ ಸಲ್ಲಿಸಿದ್ದ OS No 180/1992 ರ ವಾದ ಪತ್ರದ ಶೆಡ್ಯೂಲಿನಲ್ಲಿ ಪ್ರುರ್ವಕ್ಕೆ ಕುರುಬರ ಮಗ್ಗಳಿಗೆ ಹೋಗುವ ದಾರಿ ಇದೆ ಎಂದು ಉಲ್ಲೇಕ ಇದೆ ಅಂದರೆ ಸರಿ. ಮೇಲೆ ಹೇಳಿದ ನಿಸಿ 1 ಮತ್ತು ನಿಪಿ 28 ರಲ್ಲಿ ಕುರುಬರ ಮಗ್ಗಕ್ಕೆ ಹೋಗುವ ದಾರಿಗಳು ಕಂಡು ಬರುತ್ತವೆ ಅಂದರೆ ಸರಿಯಲ್ಲ. ಈ ಹಿಂದೆ ನನ್ನ ತಂದೆಯವರು ಸಾಕಷ್ಟು ದಾವೆಗಳನ್ನು ಇದೇ ದಾವಾ ಅಸ್ತಿಗೆ ಸಂಬಂದಿಸಿದಂತೆ ಮಾಡಿದ್ದು ಅವೆಲ್ಲವೂ ವಜಾ ಆಗಿವೆ ಅಂದರೆ ಸರಿಯಲ್ಲ. OS 180/1992 ಮಾತ್ರ ರಾಜಿಯಲ್ಲಿ ಇತ್ಯರ್ಥವಾಗಿದೆ ಅಂದರೆ ಸರಿ.

18. ಚುನಾವೆಯಣೆಯಲ್ಲಿ ನಮ್ಮ ಕುಟುಂಬಕ್ಕೆ ಪ್ರತಿವಾದಿ ಸಪ್ಪೋರ್ಟ್ ಮಾಡಲಿಲ್ಲ ಎಂಬ ಕಾರಣಕ್ಕೆ ದಾವೆಗಳನ್ನು ಹೂಡುತ್ತಾ ಅವರಿಗೆ ಕಿರುಕುಳ ನೀಡುತ್ತಿದ್ದೇನೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

19-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 19.02.2026